ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2020–21 ದಿನಾಂಕ: 06–04–2020

**ಪತ್ರಿಕಾ ಪ್ರಕಟಣೆ**

**ಕರ್ನಾಟಕ ವಿಶ್ವವಿದ್ಯಾಲಯ ಬಿ.ಎಡ್ ಪರೀಕ್ಷೆ ಮುಂದೂಡಿಕೆ**

ಬೆಂಗಳೂರು, ಏಪ್ರಿಲ್ 6 ( ಕರ್ನಾಟಕ ವಾರ್ತೆ ) : ಕೋವಿಡ್–19ರ ಕಾರಣಕ್ಕಾಗಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎಡ್ 1 ಹಾಗೂ 3ನೇ ಸೆಮಿಸ್ಟರ್ ಪರೀಕ್ಷಾ ನಡೆಸಬೇಕಿದ್ದ ವೇಳಾಪಟ್ಟಿಯನ್ನು ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ ಎಂದು ಮೌಲ್ಯಮಾಪನ ವಿಭಾಗದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# An Appeal by the Karnataka State Board of Auqaf to Tableegi Jamath Members

Bengaluru, April 06 (Karnataka Information):

It has come to the notice that there was a Tableegi Jamath Congregation (Ijtema)in Markaz Jazarath Nizamuddin, Delhi in the month of march 2020, which was attended by large numver of Tableegi Jamath Members from Karnataka state. Many people have travelled back to their cities and home after attending the Congregation (Ijtema), and there are possibilities of them getting infected with COVID-19.

It is hereby called upon to all those who have attended the Congregation (Ijtema) at Markaz Hazarath Nizamuddin, Delhi in the month of march 2020, are requested to come forward voluntarily and to contact Health Department Arogya Helpline 080-29711171, or visit the nearest Government District of Taluk Hospitals for a health checkup immediately in their interest and in the interest of the community at large.

The District Waqf Officers/District Health Officers at the Districts shall facilitate in the conduct of the health checkup.

For more details Contact: 080-46848600, 080-66692000, Mobile-9745697456 or Helpline-Toll free number 104.

## Suspension of Prayers and visit of Qabrasthans/Dargahs on SHAB-E-BARAT

Bengaluru, April 06 (Karnataka Information): Suspension of Congregational Prayers and visit to the Qabrasthans (Muslim Graveyards)/Dargahs on the occasion of SHAB-E-BARAT on 9th April 2020 due to outburst of COVID-19.

SHAB-E-BARAT is considered as one of the auspicious nights on the Islamic calendar, which is celebrated with pomp and enthusiasm by muslims all over the world, during this occasion the Muslims aggregate is Masjid for overnight prayers. The SHAB-E-BARAT this year is slotted on thursday 9th April 2020.

Due to the outburst of COVID-19 the Governament of Karnataka has issued directions and orders to suspend the congregational prayers as cited in the reference above.

The Imrat-e-Sharia of Karnataka have also issued preventive measures which have to to be duly followed by all the Muslims on the occasion of SHAB-E-BARAT. However number of Qabrasthan/Dargah committees have issued notices in this regard. there is is a need to reiterate these directions to the managements of masjid/Qabrasthans/Dargahs in this regard.

## ತಬ್ಲೀಗಿ ಜಮಾತ್ ಸದಸ್ಯರಲ್ಲಿ ಕರ್ನಾಟಕ ರಾಜ್ಯ ಔಕಾಫ್ ಮಂಡಳಿಯ ಮನವಿ

ಬೆಂಗಳೂರು, ಏಪ್ರಿಲ್ 06 (ಕರ್ನಾಟಕ ವಾರ್ತೆ):

2020ರ ಮಾರ್ಚ್ ತಿಂಗಳಲ್ಲಿ ದೆಹಲಿಯ ಮರ್ಕಜ್ ಹಝರತ್ ನಿಝಾಮುದ್ದೀನ್‌ನಲ್ಲಿ ತಬ್ಲೀಗಿ ಜಮಾತ್ ಸಮಾವೇಶ ನಡೆದಿದ್ದು, ಕರ್ನಾಟಕ ರಾಜ್ಯದಿಂದ ಭಾರಿ ಸಂಖ್ಯೆಯಲ್ಲಿ ತಬ್ಲೀಗಿ ಜಮಾತ್ ಸದಸ್ಯರು ಪಾಲ್ಗೊಂಡಿದ್ದಾರೆ. ಸಮಾವೇಶದಲ್ಲಿ ಪಾಲ್ಗೊಂಡ ಬಳಿಕ ಬಹಳಷ್ಟು ಮಂದಿ ಮರಳಿ ತಮ್ಮ ನಗರಗಳಿಗೆ □□□□ ಮನೆಗಳಿಗೆ ಮರಳಿದ್ದಾರೆ. ಈ ಸದಸ್ಯರು ಕೋವಿಡ್ 19 ಸೋಂಕಿಗೆ ಒಳಗಾಗಿರುವ ಸಾಧ್ಯತೆ ಇದ್ದು ಅವರು ತಪ್ಪದೇ ಆರೋಗ್ಯ ಇಲಾಖೆಯ ಸಹಾಯವಾಣಿ 080-29711171ಗೆ ಸಂಪರ್ಕಿಸುವುದು ಅಥವಾ ಕೂಡಲೇ ಹತ್ತಿರದ ಜಿಲ್ಲಾ ಅಥವಾ ತಾಲೂಕು ಮಟ್ಟದ ಆಸ್ಪತ್ರೆಗೆ ಭೇಟಿ ನಿಡಿ ಆರೋಗ್ಯ ತಪಾಸಣೆಯನ್ನು ಮಾಡಿಸಿಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಔಕಾಫ್ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇಸ್ಲಾಹುದ್ದೀನ್ ಜೆ ಗಡ್ಯಾಲ್ □□□□ □□□□□□□□□□□□□ □□□□□□□□□□□□□□.

2020ರ ಮಾರ್ಚ್ ತಿಂಗಳಲ್ಲಿ ದೆಹಲಿಯ ಮರ್ಕಜ್ ಹಝರತ್ ನಿಝಾಮುದ್ದೀನ್‌ನಲ್ಲಿ ತಬ್ಲೀಗಿ ಜಮಾತ್ ಸಮಾವೇಶದಲ್ಲಿ ಪಾಲ್ಗೊಂಡ ಸದಸ್ಯರು ಸ್ವಯಂ ಪ್ರೇರಣೆಯಿಂದ ಆರೋಗ್ಯ ಇಲಾಖೆಯ ಸಹಾಯವಾಣಿ ಆರೋಗ್ಯವನ್ನು 080-29711171ಗೆ ಸಂಪರ್ಕಿಸುವುದು ಅಥವಾ ಕೂಡಲೇ ಹತ್ತಿರದ ಜಿಲ್ಲಾ ಅಥವಾ ತಾಲೂಕು ಮಟ್ಟದ ಆಸ್ಪತ್ರೆಗೆ ಭೇಟಿ ನಿಡಿ ಆರೋಗ್ಯ ತಪಾಸಣೆಯನ್ನು ಮಾಡಿಸಿಕೊಳ್ಳುವುದು ಮತ್ತು ಇದು ಸಮುದಾಯದ ಹಿತದೃಷ್ಟಿಯಿಂದ ಕೂಡಲೇ ತಪಾಸಣೆ ಮಾಡಿಸಿಕೊಳ್ಳಬೇಕಾಗಿ ಕೋರಿದ್ದಾರೆ.

ಜಿಲ್ಲಾ ವಕ್ಫ್ ಅಧಿಕಾರಿಗಳು/ಜಿಲ್ಲಾ ಆರೋಗ್ಯ ಅಧಿಕಾರಿಗಳು, ಆರೋಗ್ಯ ತಪಾಸಣೆಗೆ ಅಗತ್ಯವಾದ ನೆರವು ಒದಗಿಸಲಿದ್ದಾರೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : 080-46848600 / 080-66692000/ 9745697456/ ಸಹಾಯವಾಣಿ ಸಂಖ್ಯೆ –ಟಾಲ್ ಫ್ರೀ –104 □□□□□□□□□□□□□□□□□□□□ □□□□ □□□□□□□□□□□□□□.

## ಷಬ್–ಎ–ಬರಾತ್ ದಿನದಂದು
## ಸಾಮೂಹಿಕ ಪ್ರಾರ್ಥನೆ, ಖಬರ್‌ಸ್ತಾನ್‌ಗಳಿಗೆ ಭೇಟಿ ಅಮಾನತು

ಬೆಂಗಳೂರು, ಏಪ್ರಿಲ್ 06 (ಕರ್ನಾಟಕ ವಾರ್ತೆ):

ಮುಂದಿನ ಏಪ್ರಿಲ್ 9 ರಂದು ಮುಸ್ಲಿಂ ಸಮುದಾಯದ ಪವಿತ್ರವಾದ ರಾತ್ರಿ ಎಂದು ಆಚರಿಸಲಾಗುವ ಷಬ್–ಎ–ಬರಾತ್ ಇದ್ದು, ಕೋವಿಡ್ 19 ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸಾಮೂಹಿಕ ಪ್ರಾರ್ಥನೆ, ಖಬರ್‌ಸ್ತಾನ್‌ಗಳಿಗೆ ಭೇಟಿ ನೀಡುವುದನ್ನು ಅಮಾನತುಗೊಳಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಔಕಾಫ್ ಮಂಡಳಿಯ ಮುಖ್ಯ

ಕಾರ್ಯನಿರ್ವಹಣಾಧಿಕಾರಿ ಇಸ್ಲಾಹುದ್ದೀನ್ ಜೆ ಗದ್ಯಾಲ್ □□□□ □□□□□□□□□□□□ □□□□□□□□□□□□.

ಇಸ್ಲಾಮಿಕ್ ಕ್ಯಾಲೆಂಡರ್ ಪ್ರಕಾರ ಷಬ್–ಎ ಬರಾತ್ ಅನ್ನು ಒಂದು ಪವಿತ್ರವಾದ ರಾತ್ರಿ ಎಂದು ಆಚರಿಸಲಾಗುತ್ತದೆ. ಜಗತ್ತಿನ ಎಲ್ಲ ಭಾಗದ ಮುಸ್ಲಿಮರು ಅತ್ಯಂತ ಸಂಭ್ರಮ, ಸಡಗರದಿಂದ ಆಚರಿಸುವ ಈ ಸಂದರ್ಭದಲ್ಲಿ ಇಡೀ ರಾತ್ರಿ ಮಸೀದಿಗಳಲ್ಲಿ ಸಾಮೂಹಿಕವಾಗಿ ಸೇರಿ ಪ್ರಾರ್ಥಿಸಲಾಗುತ್ತದೆ. ಈ ವರ್ಷ ಷಬ್ ಎ ಬರಾತ್ ಏಪ್ರಿಲ್ 9, 2020ರಂದು ಬಂದಿದೆ. ಆದರೆ ಕೋವಿಡ್ 19 ವ್ಯಾಪಕವಾಗಿ ವ್ಯಾಪಿಸುತ್ತಿರುವುದರಿಂದ ಕರ್ನಾಟಕ ಸರ್ಕಾರವು ನೀಡಿರುವ ವಿವಿಧ ಆದೇಶಗಳಾನುಸಾರ ನಿರ್ದೇಶನಗಳನ್ನು ಸಾಮೂಹಿಕ ಪ್ರಾರ್ಥನೆಗಳನ್ನು ಅಮಾನತುಮಾಡಿದೆ.

ಕರ್ನಾಟಕದ ಇಮಾರತ್–ಎ–ಶರಿಯಾ ಈ ಕುರಿತು ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿದ್ದು, ಎಲ್ಲಾ ಮುಸಲ್ಮಾನ ಬಾಂಧವರು ಷಬ್ ಎ ಬರತ್ ದಿನ ಇವುಗಳನ್ನು ಅನುಸರಿಸಲು ತಿಳಿಸಲಾಗಿದೆ. ಈಗಾಗಲೇ ಖಬರಸ್ತಾನ್‌ಗಳು/ದರ್ಗಾ ಸಮಿತಿಗಳು ಈ ಕುರಿತು ನೋಟಿಸ್ ನೀಡಿದ್ದಾರೆ. ಆದರೂ ಮಸೀದಿ, ಖಬರಸ್ತಾನ್ ಮತ್ತು ದರ್ಗಾಗಳ ಆಡಳಿತ ಮಂಡಳಿಗಳಿಗೆ ಮತ್ತೊಮ್ಮೆ ಒತ್ತಿ ಹೇಳುವ ಅಗತ್ಯವಿದೆ.

ಈ ಮೂಲಕ ನಿರ್ದೇಶಿಸುವುದೇನೆಂದರೆ ಎಲ್ಲ ಆಡಳಿತ ಮಂಡಳಿಗಳು ಮಸೀದಿಯಲ್ಲಿ ಸಾಮೂಹಿಕ ಪ್ರಾರ್ಥನೆಗೆ ಅವಕಾಶ ಮಾಡಿಕೊಡಬಾರದು ಮತ್ತು ಕಬರಸ್ತಾನ್/ದರ್ಗಾಗಳ ಆಡಳಿತ ಮಂಡಳಿಗಳೂ ಏಪ್ರಿಲ್ 9, 2020ರಂದು ಇರುವ ಷಬ್ ಎ ಬರಾತ್ ನಂದು ಸಾಮೂಹಿಕ ಪ್ರಾರ್ಥನೆಯನ್ನು ಅಮಾನತು ಮಾಡಬೇಕು.

ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲೂ ಧಾರ್ಮಿಕ ಆಚರಣೆಗಳನ್ನು ಖಬರಸ್ತಾನ್/ದರ್ಗಾಗಳಿಗೆ ಅವಕಾಶ ಮಾಡಿಕೊಡಬಾರದು ಮತ್ತು ಖಬರಸ್ತಾನ್/ದರ್ಗಾಗಳ ಪ್ರವೇಶ ದ್ವಾರಗಳ ಮುಚ್ಚಿರಬೇಕು ಎಂದು ಈ ಮೂಲಕ ಸೂಚಿಸಲಾಗುತ್ತಿದೆ.

ಖಬರಸ್ತಾನ/ದರ್ಗಾಗಳ ಆಡಳಿತ ಮಂಡಳಿಗಳು ಸಾರ್ವಜನಿಕ ಆರೋಗ್ಯದ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಈ ಆದೇಶವನ್ನು ಜಾರಿಗೆ ತರಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ನಿರ್ದೇಶಿಸಲಾಗಿದೆ.

ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾಮಟ್ಟದ ವಕ್ಫ್ ಸಲಹಾ ಸಮಿತಿಗಳ ಎಲ್ಲ ವಕ್ಫ್ ಅಧಿಕಾರಿಗಳು ಆದೇಶವನ್ನು ಪಾಲಿಸಬೇಕಾಗಿ ಮತ್ತು ಎಲ್ಲ ವಕ್ಫ್ ಆಡಳಿತ ಮಂಡಳಿಗೆ ತಿಳಿಸುವುದರ ಜೊತೆಗೆ ಆದೇಶ ಜಾರಿಯಾಗುವುದನ್ನು ಖಚಿತಪಡಿಸಿಕೊಳ್ಳುವಂತೆ ಆದೇಶಿಸಲಾಗಿದೆ. ಈ

ವಿಷಯದಲ್ಲಿ ಯಾವುದೇ ರೀತಿಯ ಉಲ್ಲಂಘನೆಯನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.